# ಗಾರ್ಮೆಂಟ್ಸ್ ಕಾರ್ಮಿಕರಿಗೆ 2012ರ ತುಟ್ಟಿಭತ್ಯೆಯನ್ನು ಜಾರಿ ಮಾಡಿಸುವಲ್ಲಿ ಯಶಸ್ವಿಯಾದ GATWU

*2012ರ ಏಪ್ರಿಲ್‌ನಿಂದ ಹೆಚ್ಚಳವಾದ ಡಿ.ಎ. ತಿಂಗಳಿಗೆ 408 ರೂ (ದಿನಕ್ಕೆ 15.69) ಅನ್ನು ಗಾರ್ಮೆಂಟ್ಸ್ ಕಾರ್ಮಿಕರಿಗೆ ನೀಡಲೇಬೇಕೆಂದು ಆಗ್ರಹಿಸಿ GATWU ಪ್ರಮುಖ ಮಾಲೀಕ ವರ್ಗಕ್ಕೆ (ಟೆಕ್ಸ್‌ಪೋರ್ಟ್ ಸಮೂಹ, ಆದಿತ್ಯ ಬಿರ್ಲಾ ನೋವಾ ಲಿ. ಬಾಂಟಿರೆಯಾನ್ ಫ್ಯಾಷನ್ಸ್ ಲಿ. ನಮಸ್ತೆ ಎಕ್ಸ್‌ಪೋರ್ಟ್ಸ್, ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್, (ಮೈಸೂರು, ಬೆಂಗಳೂರು), ಶಾಹಿ ಎಕ್ಸ್‌ಪೋರ್ಟ್ಸ್, ಅರವಿಂದ್ ಇತ್ಯಾದಿ.) ಪತ್ರ ಬರೆದಿತ್ತು. ಜೊತೆಗೆ, ಪ್ರಮುಖ ಬ್ರಾಂಡ್‌ಗಳಿಗೂ ಸಹ ಪತ್ರವನ್ನು ಬರೆದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿತ್ತು. ಪರಿಣಾಮವಾಗಿ. 1.4.2012 ರಿಂದ ಗಾರ್ಮೆಂಟ್ಸ್ ಕಾರ್ಮಿಕರು ತಿಂಗಳಿಗೆ 408 ರೂ.ಗಳ ಡಿ.ಎ.ಯನ್ನು ಪಡೆದುಕೊಂಡಿದ್ದಾರೆ.*

ಆತ್ಮೀಯ ಕಾರ್ಮಿಕರೇ,

ಪ್ರತಿವರ್ಷವೂ ಸರ್ಕಾರವು ಕಾರ್ಮಿಕರಿಗೆ ಹೆಚ್ಚಿಸುವ ಡಿ.ಎ.ಯನ್ನು, ಗಾರ್ಮೆಂಟ್ಸ್ ಕಾರ್ಖಾನೆಯ ಆಡಳಿತವರ್ಗ ಎಲ್ಲ ಕಾರ್ಮಿಕರಿಗೆ ಕೊಡುತ್ತಿರಲಿಲ್ಲ. ತಾಂತ್ರಿಕ ಕಾರಣಗಳನ್ನು ನೀಡಿ ಇಷ್ಟ ಬಂದವರಿಗೆ ಇಷ್ಟ ಬಂದಷ್ಟು ನೀಡಿ, ಕಾರ್ಮಿಕರಿಗೆ ಇದನ್ನು ತಾವು ನೀಡುವ ಇನ್‌ಕ್ರಿಮೆಂಟ್ ಎಂದು ನಂಬಿಸಲಾಗುತ್ತಿತ್ತು.

GATWU ಪ್ರತಿ ವರ್ಷವೂ ಕರಪತ್ರಗಳನ್ನು ಮುದ್ರಿಸಿ, ಅದನ್ನು ಕಾರ್ಮಿಕರಿಗೆ ಹಂಚಿ ಇದು ನಿಮ್ಮ ಆಡಳಿತವರ್ಗದವರು ಕಡ್ಡಾಯವಾಗಿ ನೀಡಬೇಕಾದ ಡಿ.ಎ ಹಣ ಎಂದು ಕಾರ್ಮಿಕರಿಗೆ ತಿಳುವಳಿಕೆ ನೀಡುತ್ತಲೇ ಬರುತ್ತಿದೆ. ಈ ವರ್ಷ GATWU, ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಕಾರ್ಮಿಕರಿಗೆ ತಿಳುವಳಿಕೆ ನೀಡುವುದರೊಂದಿಗೆ ಆಡಳಿತವರ್ಗಕ್ಕೆ, ಬ್ರಾಂಡ್‌ಗಳಿಗೆ ಪತ್ರ ಬರೆದು ಡಿ.ಎ ನೀಡಲೇಬೇಕೆಂದು ಆಗ್ರಹಿಸಿತ್ತು. ಪರಿಣಾಮವಾಗಿ ಕಾರ್ಮಿಕರು ಡಿ.ಎ.ಯನ್ನು ಪಡೆದುಕೊಂಡಿದ್ದಾರೆ. ಕೆಲವು ಕಾರ್ಮಿಕರು ಈ ರೂ. 408 ರ ಜೊತೆಗೆ ಇನ್ನೂ ಹೆಚ್ಚಿನ ಮೊತ್ತವನ್ನು (ಸುಮಾರು ರೂ. 700 ರ ವರೆಗೂ) ಪಡೆದುಕೊಂಡಿದ್ದಾರೆ.

ಸಂಗಾತಿಗಳೇ, ಕಾರ್ಮಿಕರು ಸಂಘಟಿತರಾದರೆ ಅವರನ್ನು ಯಾರೂ ವಂಚಿಸಲು ಸಾಧ್ಯವಿಲ್ಲ. ನಾವು ಈ ವರ್ಷ ಡಿ.ಎ ಸಿಕ್ಕಿದೆ ಎಂದು ಸುಮ್ಮನೆ ಕೂರುವ ಹಾಗಿಲ್ಲ. ಮುಂದಿನ ವರ್ಷ ಇದೇ ರೀತಿ ಡಿ.ಎ ಸಿಗುತ್ತದೆ ಎಂಬ ಭರವಸೆಯಿಲ್ಲ. ಆದ್ದರಿಂದ ಸಂಘಟಿತರಾಗುವ ಪ್ರಕ್ರಿಯೆಯನ್ನು ನಿರಂತರವಾಗಿ ನಾವು ಮುಂದುವರೆಸಿದಾಗ ಮಾತ್ರ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನಾವು ಪಡೆಯಲು ಸಾಧ್ಯ. ಆದ್ದರಿಂದ ತಾವುಗಳೆಲ್ಲರೂ GATWU ವಿನ ಸದಸ್ಯತ್ವ ಪಡೆದುಕೊಂಡು ಸಂಘಟನೆಯನ್ನು ಬೆಂಬಲಿಸುವುದು ಬಹಳ ಅವಶ್ಯವಾಗಿದೆ.

***ಸಂಘಟಿತರಾಗೋಣ, ನ್ಯಾಯ ಪಡೆಯೋಣ. . . . . .***

**ಕಾರ್ಮಿಕರಿಗೆ ಸೂಚನೆ: ಯಾವುದೇ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಇಲ್ಲಿಯವರೆಗೂ ಹೆಚ್ಚಳವಾದ ಡಿ.ಎ. (ದಿನಕ್ಕೆ 15.69) ದೊರೆತಿಲ್ಲವೆಂದರೆ ಅವರು ದಯವಿಟ್ಟು GATWUಅನ್ನು ಈ ಕೆಳಗಿನ ವಿಳಾಸ ಅಥವಾ ಸಂಖ್ಯೆಗಳಲ್ಲಿ ಸಂಪರ್ಕಿಸಿ.**


**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**

ನಂ 17/1, ಮೊದಲ ಮಹಡಿ, ಬಸ್‌ಸ್ಟಾಪ್ ಹತ್ತಿರ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–26,

ದೂರವಾಣಿ: **26745242**

ಮೊಬೈಲ್ : **9880371922, 9844714476, 9686229761, 9743675445,**



Scanned with OKEN Scanner